ಒ.ಎಸ್.ನಂ:103/2022
ಪಿ.ಡಬ್ಲ್ಯೂ.2

**<u>ದಿ:01.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲು:-</u>**ಪ್ರತಿವಾದಿ ಪರ ಶ್ರೀ**. K.M.B.,** ವಕೀಲರಿಂದ:**-**

ನನಗೆ ಓದಲು ಮತ್ತು ಬರೆಯಲು ಬರುತ್ತದೆ . ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ . ನನಗೆ ಸರ್ವೆ ನಂಬರ್ 102/2 ಆಸ್ತಿಯು ನಮ್ಮ ಅಜ್ಜನಿಂದ ನಮಗೆ ಸನ್ 2005 ರಲ್ಲಿ ಪಹಣಿ ಮೂಲಕ ಬಂದಿರುತ್ತದೆ . ನಮ್ಮ ತಾಯಿ ಶಾಂತಮ್ಮರವರು ಸರ್ವೆ ನಂಬರ್ 102/2 ಆಸ್ತಿಯನ್ನು ಸನ್ 2021 ರಲ್ಲಿ ನಿಪಿ 23 ದಾನ ಪತ್ರದಂತೆ ನೀಡಿರುತ್ತಾರೆ ಎಂದರೆ ಸರಿ. ಸದರಿ ನಿಪಿ 23 ದಾನಪತ್ರ ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ . ನಿಪಿ 23 ರಂತೆ ಸರ್ವೆ ನಂಬರ್ 102/2 ವಿಸ್ತೀರ್ಣ 5 ಎಕರೆ 02 ಗುಂಟೆ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಪಿ 23 ದಾನಪತ್ರವನ್ನು ರಚಿಸುವ ಮುಂಚೆ ಸರ್ವೆ ನಂಬರ್ 102/2 ನಮ್ಮ ತಂದೆ ಹೆಸರಿನಲ್ಲಿ ಇತ್ತು . ಸದರಿ ಪತ್ರವನ್ನು ತಯಾರಿಸುವ ವೇಳೆ ಸರ್ವೆ ನಂಬರ್ 102/2 ರ ಎಲ್ಲಾ ದಾಖಲೆಗಳನ್ನು ನೀಡಿ ತಯಾರಿಸಿರುತ್ತೇವೆ ಎಂದರೆ ಸರಿ. ಈ ಹಿಂದೆ ನಮ್ಮ ತಂದೆ ಹೆಸರಿಗೆ ಇದ್ದ ಸರ್ವೆ ನಂಬರ್ 102/2 ಆಸ್ತಿಯನ್ನು ನಿಪಿ 23 ದಾನ ಪತ್ರದಲ್ಲಿ ನಮೂದು ಮಾಡಿರುತ್ತಾರೆ ಎಂದರೆ ಸರಿ. ನಿಪಿ 23 ದಾನಪತ್ರದಲ್ಲಿ ಚೆಕ್ ಬಂದಿ ಪೂರ್ವ ,ಪಶ್ಚಿಮ , ಉತ್ತರ ಮತ್ತು ದಕ್ಷಿಣಕ್ಕೆ ಇರುವವರ ಸರ್ವೆ ನಂಬರ್ ಅನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆಸಿ ಪೂರ್ವಕ್ಕೆ ವೀರಣ್ಣ ಅವರು ಇದ್ದು ಅವರ ಸರ್ವೆ ನಂಬರ್ 91 ಇರುತ್ತದೆ . ಆನಗೂಡು ರೇವಣ್ಣ ರವರ ಸರ್ವೆ ನಂಬರ್ 92 ಇರುತ್ತದೆ , ಪಶ್ಚಿಮಕ್ಕೆ ಇರುವ ಜಾವಣೇರ ಕೊಟ್ರಪ್ಪ ಮತ್ತು ರುದ್ರಪ್ಪ ಅವರ ಸರ್ವೆ ನಂಬರ್ ನನಗೆ ಗೊತ್ತಿಲ್ಲ . ಉತ್ತರಕ್ಕೆ ಇರುವ ಚಂದ್ರಪ್ಪ ಅವರ ಸರ್ವೆ ನಂಬರ ಗೊತ್ತಿಲ್ಲ ಮತ್ತು ದಕ್ಷಿಣಕ್ಕೆ ಇರುವ ಶಿವಕುಮಾರ್ ಅವರ ಸರ್ವೆ ನಂಬರ್ 101 ಇರುತ್ತದೆ . ಸದರಿ ಪೂರ್ವ ಪಶ್ಚಿಮ ಉತ್ತರಕ್ಕೆ ನಮೂದು ಮಾಡಿರುವ ಜಮೀನುದಾರರ ಸರ್ವೆ ನಂಬರ್ ನಮೂದು ಮಾಡಲು ನಮಗೆ ತೊಂದರೆ ಇರುವುದಿಲ್ಲ ಎಂದರೆ ಸರಿ. ಸದರಿಯವರ ಪಹಣಿಗಳನ್ನು ನೋಡಿ ನಾವು ಅವರ ಹೆಸರಗಳನ್ನು ನಿಪಿ 23 ಚೆಕ್ ಬಂದಿಯಲ್ಲಿ ನಮೂದು ಮಾಡಿರುತ್ತೇವೆ . ನಾನು ಸದರಿ ಸನ್ 2023 ಸಾಲಿನ ಪಹಣಿಗಳನ್ನು

ನೋಡಿರುತ್ತೇನೆ . ನಿಪಿ 14 ರಂತೆ ಸರ್ವೆ ನಂಬರ್ 91/1 ವೀರಣ್ಣ ಅವರ ಹೆಸರಿಗೆ ಇರುವುದಿಲ್ಲ ರೇವಣಸಿದ್ದಪ್ಪ ಅವರ ಹೆಸರಿಗೆ ಇರುತ್ತದೆ ಎಂದರೆ ಸರಿಯಲ್ಲ. ನಿಪಿ 15 ರಲ್ಲೂ ಸಹ ಸರ್ವೆ ನಂಬರ್ 91/1 ರ ಸನ್ 2021-22 ನೇ ಸಾಲಿನಲ್ಲಿ ವೀರಣ್ಣ ಅವರ ಹೆಸರಿಗೆ ಇರುವುದಿಲ್ಲ ಪ್ರತಿವಾದಿ 2 ಸುಶೀಲಮ್ಮ ಅವರ ಹೆಸರಿಗೆ ಇರುತ್ತದೆ ಎಂದರೆ ಸರಿಯಲ್ಲ. ನಿಪಿ 23 ರಚಿಸುವ ಕಾಲಕ್ಕೆ ಸರ್ವೆ ನಂಬರ್ 91/1 ಪ್ರತಿವಾದಿ 2 ಸುಶೀಲಮ್ಮ ಅವರ ಹೆಸರಿಗೆ ಇತ್ತು ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸಾಕ್ಷಿ ನೀಡಲು ಒಬ್ಬನೇ ಬಂದಿರುತ್ತೇನೆ . ವೀರಣ್ಣ ಅವರ ಕುಟುಂಬದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸಾಕ್ಷಿ ನನಗೆ ವಾದಿ ವೀರಣ್ಣ ಅವರ ಬಗ್ಗೇ ಮಾತ್ರ ಗೋತ್ತಿರುತ್ತದೆ . ನನಗೆ ವಾದಿ ವೀರಣ್ಣ ಅವರ ಅಣ್ಣ ತಮ್ಮಂದಿರು ಗೋತ್ತಿರುವುದಿಲ್ಲ . ವಾದಿ ವೀರಣ್ಣ ಅವರ ತಂದೆ ತಾಯಿ ಹೆಸರು ಗೋತ್ತಿರುವುದಿಲ್ಲ . ವಾದಿ ವೀರಣ್ಣ ಮತ್ತು ನಾನು ದಿದ್ದಿಗಿ ಗ್ರಾಮದ ವಾಸಿಗಳು ಇರುತ್ತೇವೆ . ಈ ದಾವೆಯನ್ನು ವಾದಿಯು ಯಾರ ವಿರುದ್ದ ಯಾವ ಕಾರಣಕ್ಕೆ ಸಲ್ಲಿಸಿರುವ ಬಗ್ಗೆ ನನಗೆ ಗೋತ್ತಿಲ್ಲ . ದಾವಾ ಆಸ್ತಿಯಲ್ಲಿ ವಾದಿ ವೀರಣ್ಣರವರು ಅಜ್ಜನ ಕಾಲದಿಂದಲೂ ಸ್ವಾಧೀನ ಇರುತ್ತಾರೆ . ಈ ಬಗ್ಗೆ ನನ್ನ ತಂದೆಯಿಂದ ನನಗೆ ಮಾಹಿತಿ ತಿಳಿದಿರುತ್ತದೆ . ದಾವಾ ಆಸ್ತಿ ಸರ್ವೆ ನಂಬರ್ 91 ರ ಒಟ್ಟು ವಿಸ್ತೀರ್ಣ 2 ಎಕರೆ 38 ಗುಂಟೆ ಇರುತ್ತದೆ . ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಸ್ವಾಧೀನ ಇರುವುದಿಲ್ಲ ಎಂದು ನಾನು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ . ನಾನು ಮತ್ತು ವಾದಿ ವೀರಣ್ಣ ಸ್ನೇಹಿತರು ಇದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ಆಸ್ತಿ ಜಂಟಿ ಸ್ವಾಧೀನ ಇರುವುದಾಗಿ ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ವಾದಿ ವೀರಣ್ಣ ಅವರ ತಂದೆ ಚನ್ನಬಸಪ್ಪ ಯಾವಾಗ ಮರಣಹೊಂದಿರುತ್ತಾರೆ ನನಗೆ ಗೋತ್ತಿಲ್ಲ . ವಾದಿ ವೀರಣ್ಣ ಅವರ ತಂದೆ ಚನ್ನಬಸಪ್ಪ ಅವರು ಯಾವ ಕಾಲದಲ್ಲಿ ಉಳುಮೆ ಮಾಡಿರುವ ಬಗ್ಗೆ ನನಗೆ ಗೋತ್ತಿಲ್ಲ . ನನ್ನ ಜಮೀನಿನ ಚೆಕ್ ಬಂದಿ ಪೂರ್ವಕ್ಕೆಃ ವಾದಿ ವೀರಣ್ಣ ಜಮೀನು , ಪಶ್ಚಿಮಕ್ಕೆಃ ಸಿದ್ದಣ್ಣ ರವರ ಜಮೀನು , ಉತ್ತರಕ್ಕೆಃ ಚಂದ್ರಪ್ಪರವರ ಜಮೀನು

ಮತ್ತು ದಕ್ಷಿಣಕ್ಕೆ: ವಿಜಯಣ್ಣ ರವರ ಜಮೀನು ಇರುತ್ತದೆ . ನನ್ನ ಜಮೀನಿನ ಚೆಕ್ ಬಂದಿದಾರರ ಸರ್ವೆ ನಂಬರ್ ಹೇಳಲು ನನಗೆ ಬರುವುದಿಲ್ಲ . ವಾದಿ ವೀರಣ್ಣ ರವರು ಎಂದಿಗೂ ದಾವಾ ಆಸ್ತಿಯಲ್ಲಿ ಸ್ವಾಧೀನ ಇರುವುದಿಲ್ಲ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿ ವೀರಣ್ಣ ವಿಶ್ವಾಸಿಗರು ಇರುವ ಕಾರಣ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು